
ಕೃತಜ್ಞತೆ ಇಲ್ಲದ ನಾಯಿ
ಕಥೆ: ಪರಮಹಂಸದಾಸ
ಚಿತ್ರ: ಶಂಕರ್
ಅಗ್ನಿಪ್ರಭ ಎಂಬ ಮುನಿಗಳು ಪ್ರಶಾಂತ ವಾತಾವರಣವಿದ್ದ ಒಂದು ಕಾಡಿನಲ್ಲಿ ಒಂದು ಕುಟೀರದಲ್ಲಿ ವಾಸಿಸುತ್ತಿದ್ದರು. ಅವರ ತಪಸ್ಸಿನ ಪ್ರಭಾವದಿಂದ ಅಲ್ಲಿನ ಕಾಡು ಮೃಗಗಳು ತಮ್ಮ ಶತ್ರುತ್ವವನ್ನು ಮರೆತು ಅವರೊಡನೆ ಸಂತೋಷದಿಂದ ಬಾಳುತ್ತಿದ್ದವು.
1
ಅವುಗಳಲ್ಲಿ ಒಂದು ನಾಯಿ ಸಹ ಇತ್ತು.
2
ಒಮ್ಮೆ ಆ ನಾಯಿ ಕಾಡಿನ ಮಧ್ಯಕ್ಕೆ ಪ್ರವೇಶಿಸಿತು. ಅಲ್ಲಿ ಒಂದು ಚಿರತೆ ಈ ನಾಯಿಯನ್ನು ನೋಡಿ ಅದನ್ನು ಹಿಡಿಯಲು ಅಟ್ಟಿಸಿಕೊಂಡು ಬಂದಿತು. ನಾಯಿ ಭಯದಿಂದ ಅತ್ತಿತ್ತ ಓಡಿ ಕೊನೆಗೆ ಋಷಿಗಳಿದ್ದ ಆ ಕುಟೀರಕ್ಕೆ ಬಂದಿತು.
3
ದಯವಿಟ್ಟು ನನ್ನನ್ನು ಕಾಪಾಡಿ, ಒಂದು ಚಿರತೆ ನನ್ನನ್ನು ಅಟ್ಟಿಸಿಕೊಂಡು ಬರುತ್ತಿದೆ.
ಆ ಮುನಿಗೆ ನಾಯಿಯ ಮೇಲೆ ಕರುಣೆ ಹುಟ್ಟಿತು. ತಮ್ಮ ಕಮಂಡಲದಿಂದ ಅದರ ಮೇಲೆ ಸ್ವಲ್ಪ ನೀರನ್ನು ಚಿಮುಕಿಸಿ ಯಾವುದೋ ಒಂದು ಮಂತ್ರವನ್ನು ಹೇಳಿದರು. ತಕ್ಷಣ ಆ ನಾಯಿ ಚಿರತೆಯಾಗಿ ಮಾರ್ಪಟ್ಟಿತು.
ಎಲೈ ನಾಯಿ, ಇನ್ನು ಮೇಲೆ ನೀನು ಯಾರಿಗೂ ಭಯಪಡಬೇಕಾಗಿಲ್ಲ.
4


ನಾಯಿ ಚಿರತೆಯಾಗಿ ಬದಲಾದುದನ್ನು ನೋಡಿ ಅದನ್ನು ಅಟ್ಟಿಸಿಕೊಂಡು ಬಂದ ಚಿರತೆ ಆಶ್ಚರ್ಯಪಟ್ಟು ಹಿಂದಿರುಗಿ ಹೊರಟು ಹೋಯಿತು.
5
ಕೆಲವು ದಿನಗಳು ಈ ಚಿರತೆ ನಿರ್ಭಯವಾಗಿ ಕಾಡಿನಲ್ಲೆಲ್ಲಾ ಓಡಾಡಲಾರಂಭಿಸಿತು. ಆದರೆ ಒಂದು ದಿನ ಹುಲಿ ಅದನ್ನು ಅಟ್ಟಿಸಿಕೊಂಡು ಬಂದಿತು.
6
ಮತ್ತೆ ಪ್ರಾಣಭಯದಿಂದ ಆ ಚಿರತೆ ಋಷಿಯ ಬಳಿಗೆ ಓಡಿ ಬಂದು ಆಶ್ರಯ ಕೇಳಿತು. ಆಗ ಋಷಿ, ಯಾಕೆ ಭಯಪಡುವೆ? ಎಂದು ಪ್ರಶ್ನಿಸಿದರು.
ಋಷಿಗಳೇ, ಒಂದು ಹುಲಿ ನನ್ನನ್ನು ಹಿಡಿಯಲು ಪ್ರಯತ್ನಿಸುತ್ತಿದೆ. ದಯವಿಟ್ಟು ಮತ್ತೆ ಕಾಪಾಡಿ.
7
ಹೆದರಬೇಡ. ನಿನ್ನನ್ನು ಒಂದು ಹುಲಿಯನ್ನಾಗಿ ಮಾರ್ಪಡಿಸುತ್ತೇನೆ.
ಅಂತೆಯೇ ಚಿರತೆ ಈಗ ಹುಲಿಯಾಯಿತು. ಮತ್ತೆ ಅದು ಸಂತೋಷದಿಂದ ಕಾಡಿನಲ್ಲಿ ಸುತ್ತಲು ಆರಂಭಿಸಿತು. ಒಂದು ದಿನ ಒಂದು ಆನೆಯನ್ನು ನೋಡಿ ಅದು ಭಯದಿಂದ ಮತ್ತೆ ಋಷಿಯ ಬಳಿಗೆ ಓಡಿ ಬಂದಿತು.
ಋಷಿಗಳೇ, ದಯವಿಟ್ಟು ಮತ್ತೆ ಕಾಪಾಡಿ. ಆನೆ ನನ್ನನ್ನು ಕೊಲ್ಲಲು ಬರುತ್ತಿದೆ.
8
ಮಗು! ಭಯಪಡಬೇಡ! ನನ್ನ ಶಕ್ತಿಯಿಂದ ನಿನ್ನನ್ನು ಬಲಶಾಲಿಯಾದ ಆನೆಯನ್ನಾಗಿ ಮಾರ್ಪಡಿಸುತ್ತೇನೆ.
ಆ ಋಷಿ ಆ ಹುಲಿಯನ್ನು ಆನೆಯಾಗಿ ಬದಲಾಯಿಸಿದನು. ಇನ್ನೊಂದು ದಿನ ಒಂದು ಸಿಂಹ ಆನೆಯ ಮೇಲೆ ಜಗಳವಾಡಲು ಬಂದಿತು. ಮತ್ತೆ ಅದು ಋಷಿಯ ಬಳಿಗೆ ಭಯದಿಂದ ಓಡಿ ಬಂದು ತನ್ನ ಗೋಳನ್ನು ಹೇಳಿಕೊಂಡಿತು. ಆ ಋಷಿ ಅದನ್ನು ಸಿಂಹವನ್ನಾಗಿ ಮಾಡಿದನು.
9



ಆ ಸಿಂಹ ಸ್ವೇಚ್ಛೆ ಇಂದ ಕಾಡಿನಲ್ಲಿ ಸುತ್ತಾಡಲು ಆರಂಭಿಸಿತು.
10
ಒಂದು ದಿನ ಒಂದು ಶರಭ ಆ ಸಿಂಹವನ್ನು ಹಿಡಿಯಲು ಬಂದಿತು. ಮತ್ತೆ ಸಿಂಹ ಋಷಿಯ ಬಳಿಗೆ ಪ್ರಾಣಭಯ ದಿಂದ ಓಡಿ ಬಂದಿತು. ಋಷಿಗೆ ಮತ್ತೆ ಅದರ ಮೇಲೆ ಕರುಣೆ ಹುಟ್ಟಿತು.
11
ಸರಿ, ನೀನೂ ಶರಭನಾಗು.
ಅದನ್ನು ಅಟ್ಟಿಸಿಕೊಂಡು ಬಂದ ಶರಭ ಹೆದರಿಕೆಯಿಂದ ಕಾಡಿಗೆ ಓಡಿತು.
12
ಈ ಶರಭಕ್ಕೆ ಎಲ್ಲಿಲ್ಲದ ಗರ್ವ ಬಂದಿತು. ನನ್ನನ್ನು ಮೀರಿಸುವವರು ಈ ಪ್ರಪಂಚದಲ್ಲಿ ಯಾರೂ ಇಲ್ಲ ಎಂದು ಯೋಚಿಸಿತು. ಜೊತೆಗೆ ಒಂದು ದುರ್ಬುದ್ಧಿಯೂ ಹುಟ್ಟಿತು.
ನಾನು ಈಗ ಕಾಡಿಗೆ ರಾಜ. ಈ ಕಾಡಿನಲ್ಲಿರುವ ಎಲ್ಲ ಮೃಗಗಳೂ ನನಗೆ ಭಯದಿಂದ ಗೌರವ ಸಲ್ಲಿಸಬೇಕು. ಆದರೆ ಈ ಋಷಿ ನನಗಿಂತ ಹೆಚ್ಚು ಶಕ್ತಿಯುಳ್ಳವನು. ಬೇರೆ ಯಾವುದಾದರೂ ಪ್ರಾಣಿ ಇವನಲ್ಲಿ ಆಶ್ರಯ ಪಡೆದರೆ, ಅದನ್ನು ಇನ್ನೊಂದು ಶರಭನನ್ನಾಗಿ ಬದಲಾಯಿಸಬಹುದು. ಆಗ ನಾನು ಅದಕ್ಕೆ ಭಯಪಡಬೇಕಾಗುತ್ತದೆ. ಯಾರಿಗೆ ಗೊತ್ತು, ಆ ಹೊಸ ಶರಭ ನನ್ನನ್ನು ಕೊಂದರೂ ಕೊಲ್ಲಬಹುದು. ಆದುದರಿಂದ ಈ ಋಷಿಯನ್ನು ಕೊಂದುಬಿಟ್ಟರೆ ಯಾವ ಭಯವೂ ಇರುವುದಿಲ್ಲ.
13
ಇಂತಹ ಕೆಟ್ಟ ಆಲೋಚನೆಯಿಂದ ಆ ಶರಭವು ಋಷಿಯ ಬಳಿಗೆ ಬಂದಿತು.
14
ಎಲೈ ನಾಯಿ, ನೀನು ಹುಟ್ಟಿನಿಂದ ನಾಯಿಯಾಗಿದ್ದೆ. ನಿನ್ನ ಮೇಲೆ ಕರುಣೆಯಿಂದ ನಿನ್ನನ್ನು ಕ್ರಮೇಣ ಶರಭನನ್ನಾಗಿ ಮಾಡಿದೆ. ಆದರೆ ಕೃತಜ್ಞತೆ ಇಲ್ಲದ ನೀನು ನನ್ನನ್ನೇ ಕೊಲ್ಲಲು ಯೋಚಿಸುತ್ತಿರುವೆ ಆದುದರಿಂದ ಮತ್ತೆ ನೀನು ನಾಯಿಯಾಗಿ ಮಾರ್ಪಡು.
ಅವನು ಹಾಗೆ ಹೇಳಿದುದೇ ತಡ, ಅದು ಮತ್ತೆ ನಾಯಿಯಾಗಿ ಮಾರ್ಪಟ್ಟಿತು.
15
ಈ ಕಥೆ ಮಹಾಭಾರತದ ಶಾಂತಿಪರ್ವದಲ್ಲಿ ಬರುತ್ತದೆ.